ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ,

ಉಪಾಧ್ಯಕ್ಷರು: "ಖಂಡ 2 ರಿಂದ 3 ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಹಿಂತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ|| ಜಿ. ಪರಮೇಶ್ವರ್ (ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, "2002 ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ:

"2002 ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉ) ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

ಡಾ|| ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, "2002 ರ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಡಾ|| ಜಿ. ಪರಮೇಶ್ವರ್: ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಯನ್ನು ತರತಕ್ಕ ಉದ್ದೇಶ 1984 ರಲ್ಲಿ ರಾಜ್ಯದ ಸಾರ್ವಜನಿಕ ಹಿತದೃಷ್ಟಿಯಿಂದ ಈ ವೃತ್ತಿಪರ ಶಿಕ್ಷಣದಲ್ಲಿ ಖಾಸಗಿ ಸಂಸ್ಥೆಯವರು ಹೆಚ್ಚು ಹಣವನ್ನು ತೆಗೆದುಕೊಳ್ಳುತ್ತಾರೆಂದು ಹೇಳಿ ಇದನ್ನು ನಿಯಂತ್ರಣ ಮಾಡಬೇಕು, ನಿಷೇಧ ಮಾಡಬೇಕೆನ್ನುವ ಉದ್ದೇಶಕ್ಕಾಗಿ ಆ ಸಂದರ್ಭದಲ್ಲಿ ಅಂದರೆ 1984 ರಲ್ಲಿ ಈ ಮಸೂದೆಯನ್ನು ತಂದಿದ್ದಾರೆ. ಆದರೆ ಆ ಸಂದರ್ಭದಲ್ಲಿ ರಾಜ್ಯದಲ್ಲಿರತಕ್ಕ ವಿಶ್ವವಿದ್ಯಾನಿಲಯಗಳು 1976 ಕರ್ನಾಟಕ ವಿಶ್ವವಿದ್ಯಾನಿಲಯ ಕಾಯ್ದೆಯ ಅಡಿಯಲ್ಲಿದ್ದಂಥ ಎಲ್ಲಾ ವಿಶ್ವವಿದ್ಯಾನಿಲಯಗಳನ್ನು ಸೇರಿಸಿದ್ದಾರೆ.

ಆದಾದಮೇಲೆ 1984 ಆದಮೇಲೆ ರಾಜ್ಯದಲ್ಲಿ ಎರಡು ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿದ್ದಾರೆ. ಒಂದು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಮತ್ತೊಂದು ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ. ಈ ಎರಡೂ ವಿಶ್ವ ವಿದ್ಯಾನಿಲಯಗಳೂ ಕೂಡ ಈ ಕ್ಯಾಪಿಟೇಷನ್ ಅಬಾಲಿಷನ್ ಆಕ್ಟ್‌ನ ಚೌಕಟ್ಟಿನಲ್ಲಿ ಬಂದಿರಲಿಲ್ಲ. ಈಗ ಇತ್ತೀಚಿನ ಬೆಳವಣಿಗೆಯನ್ನು ನೋಡಿದಮೇಲೆ ಮತ್ತು ಇದನ್ನು ಎರಡು-ಮೂರು ಸಾರಿ ತರುವುದಕ್ಕೆ ಕೂಡ ಪ್ರಯತ್ನವನ್ನು ಮಾಡಿದ್ದೆವು. ಇದರ ಅವಶ್ಯಕತೆ ಬಹಳ ಮುಖ್ಯ ಎನ್ನುವಂಥ ವಿಚಾರವನ್ನು ಅರಿತುಕೊಂಡು ಈ ಒಂದು ಮಸೂದೆಯನ್ನು ಇವತ್ತುತರುತ್ತಿದ್ದೇವೆ. ಆ ಎರಡು ವಿಶ್ವವಿದ್ಯಾನಿಲಯಗಳೂ ಕೂಡ 1984 ರ ಏನು ಕ್ಯಾಪಿಟೇಷನ್ ಅಬಾಲಿಷನ್ ಆಕ್ಟ್ ಇದೆ, ಅದರದ ಚೌಕಟ್ಟಿನಲ್ಲಿ ಬರಬೇಕೆನ್ನುವುದು ಉದ್ದೇಶ. ಅದನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಒಪ್ಪಬಹುದು.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: "2002 ರ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು: ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತಿ ವಿಧೇಯಕದ ಭಾಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, "2002 ರ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ:

"2002 ರ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು.

6. ನಿಯಮ 69ರ ಮೇರೆಗೆ

ವಿಷಯ: ಹೈದರಾಬಾದ್ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಸಿಇಟಿನಲ್ಲಿ ಸೀಟುಗಳನ್ನು ನಿಗದಿ ಪಡಿಸುವ ಬಗ್ಗೆ.

ಉಪಾಧ್ಯಕ್ಷರು: ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ ಈಗಾಗಲೇ ಮುಗಿದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೆ, ಈಗ ಒಂದು ಪ್ರಮುಖವಾದ ವಿಚಾರ ಹೇಳಬೇಕು. ನನ್ನದೂ ಸಹ ತಪ್ಪಾಗಿದೆ. ಮಾತನಾಡತಕ್ಕ ಸಂದರ್ಭದಲ್ಲಿ ಈ ಸಿಇಟಿನಲ್ಲಿ ರಿಸರ್ವೇಷನ್ ಮಾಡತಕ್ಕ ವಿಚಾರದಲ್ಲಿ ನಮ್ಮ ಉತ್ತರ ಕರ್ನಾಟಕದ ಶಾಸಕರು ಬಹಳ ದಿನಗಳಿಂದ ಅವರ ಆಕ್ರೋಶವನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಪ್ರಾದೇಶಿಕ ಅಸಮತೋಲನದ ಬಗ್ಗೆ ಡಾ:ನಂಜುಡಪ್ಪನವರು ಒಂದು ವರದಿ ಕೊಟ್ಟಿದ್ದಾರೆ ಅದಕ್ಕೆ ಇಡೀ ಸಭೆ ನಾವೊಂದು ಸಂವಿಧಾನದಲ್ಲಿಬದಲಾವಣೆ ತರಬೇಕು ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅವರ ಹತ್ತಿರ ಪೆಂಡಿಂಗ್ ಇದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಾಗಿರತಕ್ಕಂಥಹ ಹಂಪನಗೌಡರು ಮತ್ತು ಕರಡಿ ಸಂಗಣ್ಣನವರು ಮಾತನಾಡುತ್ತಾರೆ. ನಿನ್ನೆ ದಿನ ನಾನು ವಿನಂತಿ ಮಾಡಿಕೊಂಡೆ. ದಯಮಾಡಿ ಅವರು ಮಾತನಾಡಬೇಕೆಂದು ಇದ್ದಾರೆಂದು ವಿನಂತಿ ಮಾಡಿಕೊಂಡೆ. ದಯಮಾಡಿ ಅವರುಗಳಿಗೆ ಒಂದು ಐದೈದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಹಂಪನಗೌಡರು ಐದೇ ನಿಮಿಷ ಮಾತನಾಡಬೇಕು.

ಶ್ರೀ ಹಂಪನಗೌಡ ಬದರ್ಲಿ (ಸಿಂಧನೂರು): ಮಾನ್ಯ ಉಪಾಧ್ಯಕ್ಷರೆ, ಇವತ್ತು ತಾವು ನಮ್ಮ ಹೈದರಾಬಾದ್ ಕರ್ನಾಟಕದ ಶಾಸಕರಿಗೆ ಆ ಭಾಗದ ಸಿಇಟಿ ಘಟಕದಿಂದ ಆಗಿರತಕ್ಕ ಅನ್ಯಾಯದ ಬಗ್ಗೆ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅನುವು ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮ ಹೈದರಾಬಾದ್-ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿರತಕ್ಕಂಥಹ ಒಂದುಪ್ರದೇಶ. ಈ ಪ್ರದೇಶದ ವಿದ್ಯಾರ್ಥಿಗಳು ಸುಮಾರು ನಾಲ್ಕು ಜಿಲ್ಲೆಗಳು ಆದರಲ್ಲಿ ಒಳಗೊಳ್ಳುತ್ತವೆ. ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಈ ನಾಲ್ಕು ಜಿಲ್ಲೆಗಳ ವಿದ್ಯಾರ್ಥಿಗಳು, ಉತ್ತರ ಕರ್ನಾಟಕ ಬಾಂಬೆ-ಕರ್ನಾಟಕ ಮತ್ತು ಹಳೆಯ ಮೈಸೂರಿನ ವಿದ್ಯಾರ್ಥಿಗಳ, ಈ ಮೆರಿಟ್ ಆಧಾರದ ಮೇಲೆ ನಮ್ಮ ಭಾಗದಲ್ಲಿ ಬಹಳಷ್ಟು ವಿದ್ಯಾರ್ಥಿಗಳು ವಿದ್ಯಾರ್ಹತೆ ಬಹಳ ಕಡಿಮೆ. ಶಿಕ್ಷಣ ಗುಣಮಟ್ಟವೂ ಕೂಡ ಬಹಳ ಕಡಿಮೆ ಇರುವುದರಿಂದ ವೃತ್ತಿಪರ ಶಿಕ್ಷಣದಲ್ಲಿ ಅಭ್ಯಾಸ ಮಾಡಲು ಬಹಳಷ್ಟು ಅನುಕೂಲತೆಗಳು ಕಡಿಮೆ ಇದ್ದಾವೆ. ಈ ಅನುಕೂಲತೆಗಳನ್ನು ಸರಿಪಡಿಸಬೇಕಾದರೆ ಈಗೇನು ಸರ್ಕಾರ ಹೊಸದಾಗಿ ಸಿಇಟಿ ಘಟಕಕ್ಕೆ ನಿಯಮಗಳನ್ನು ರಚನೆ ಮಾಡತಕ್ಕ ಸಂದರ್ಭದಲ್ಲಿ ನಾವು ಒತ್ತಾಯಪಡಿಸುವುದು ಇಷ್ಟೇ. ಯಾವ ರೀತಿ ಹಿಂದೆ ಈ ಘಟಕದಲ್ಲಿ ಕೆಲವು ನಿಯಮಗಳನ್ನು ಮಾಡಿದ್ದೀರಿ, ಸೈನಿಕರ ಮಕ್ಕಳಿಗೆ ಐದು ಪರ್ಸೆಂಟ್ ಸೀಟುಗಳನ್ನು ನಿಗದಿ ಮಾಡಿದ್ದೀರಿ. ಕ್ರೀಡಾಪಟುಗಳಿಗೆ ಕೆಲವು ಸೀಟುಗಳನ್ನು ನಿಗದಿ ಮಾಡಿದ್ದೀರಿ ಮತ್ತು ಅದೇ ರೀತಿ ಈ ಬೇರೆ ಬೇರೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರತಕ್ಕಂಥಹ ಗಡಿನಾಡ ಕನ್ನಡಿಗರಿಗೂ ಕೂಡ ಕೆಲವು ಸೀಟುಗಳನ್ನು ನಿಗದಿ ಮಾಡಿದ್ದೀರಿ. ಅದೇ ರೀತಿ ನಮ್ಮ ಹೈದರಾಬಾದ್ ಕರ್ನಾಟಕದ ವಿದ್ಯಾರ್ಥಿಗಳಿಗೆ ವೃತ್ತಿ ಪರ ಶಿಕ್ಷಣದಲ್ಲಿ